ದಿನಾಂಕ:17-06-2022ರಂದು ಯೋಜನೆಯ "ನಿಯೋಜಿತ ಸ್ಥಳ" ಶೆಳ್ಳಗಿ ಗ್ರಾಮ, ತಾ|| ಸುರಪುರ ಜಿ|| ಯಾದಗಿರಿಯಲ್ಲಿ ಮಧ್ಯಾಹ್ನ 01.00ಗಂಟೆಗೆ "ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬೆಂಗಳೂರುರವರು ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರು ಶೆಳ್ಳಗಿ ಮರಳು ಬ್ಲಾಕ್‌ನಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ಕೃಷ್ಣಾ ನದಿ ತೀರದ ಎದುರಿನ ಸರ್ವೆ ನಂ. 126, 127, 128/2 & 129 ಶೆಳ್ಳಗಿ ಗ್ರಾಮ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆಯಲ್ಲಿ ಒಟ್ಟು 30.00 ಎಕರೆ ಪ್ರದೇಶದಲ್ಲಿ ಪ್ರತಿ ವರ್ಷಕ್ಕೆ 1,25,290 ಟನ್ ಸಾಮರ್ಥ್ಯದ ಮರಳು ಗಣಿಕಾರಿಕೆಯನ್ನು ಅರೆ-ಯಾಂತ್ರಿಕೃತ ಪದ್ಧತಿಯ (ಓಪನ್ ಕಾಸ್ಟ್ ಮೈನಿಂಗ್) ಪ್ರಕಾರ ಪ್ರಸ್ಥಾಪಿಸಿರುವ ಯೋಜನೆಯಿಂದ ಪರಿಸರದ ಮೇಲೆ ಆಗುವ ಪರಿಣಾಮಗಳ ಕುರಿತು ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಲು ಜರುಗಿದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು:

<u>ಹಾಜರಿದ್ದ ಅಧಿಕಾರಿಗಳು :</u>

ಶ್ರೀಯುತರು:

1) ಶ್ರೀ. ಶಂಕರಗೌಡ ಸೋಮನಾಳ, ಕೆ.ಎ.ಎಸ್. (ಆಯ್ಕೆ ಶ್ರೇಣಿ)
ಅಪರ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಪರಿಸರ ಸಾರ್ವಜನಿಕ ಆಲಿಕೆ ಸಭೆ
ಯಾದಗಿರಿ ಜಿಲ್ಲೆ, ಯಾದಗಿರಿ.
2) ಶ್ರೀ. ಮಧುಸೂದನ್,
ಹಿರಯ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕಲಬುರಗಿ.
3) ಶ್ರೀ. ಕೆ.ರಾಜು, ಪರಿಸರ ಅಧಿಕಾರಿಗಳು,
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಯಾದಗಿರಿ
4) ಶ್ರೀ. ಸುಬ್ಬಣ್ಣ ಜಮಖಂಡಿ, ತಹಸೀಲ್ದಾರರು, ಸುರಪುರ

*****

ಸಭೆಯ ಪ್ರಾರಂಭದಲ್ಲಿ ಶ್ರೀ ಕೆ. ರಾಜು, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಯಾದಗಿರಿ ಇವರು ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಯಾದಗಿರಿ ಇವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವಂತೆ ವಿನಂತಿಸುತ್ತಾ ಸದರಿ ಸಭೆಗೆ ಆಗಮಿಸಿದ ಮಂಡಳಿಯ ಹಿರಿಯ ಪರಿಸರ ಅಧಿಕಾರಿಗಳು, ಕರಾಮಾನಿಮಂ, ಕಲಬುರಗಿ ಇವರನ್ನು ವೇದಿಕೆಯ ಮೇಲೆ ಆಸೀನರಾಗುವಂತೆ ಕೋರಿದರು ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ, ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್‌ನ ಎಲ್ಲಾ ಸಿಬ್ಬಂದಿಗಳಿಗೆ, ಯೋಜನೆಯ ತಾಂತ್ರಿಕ ಸಿಬ್ಬಂಧಿಗಳಿಗೆ, ಪೋಲಿಸ್ ಇಲಾಖಾ ಅಧಿಕಾರಿಗಳಿಗೆ, ಆರೋಗ್ಯ ಇಲಾಖೆ ಸಿಬ್ಬಂದಿಯವರಿಗೆ, ಮಾಧ್ಯಮದವರಿಗೆ ಹಾಗೂ ಎಲ್ಲಾ ಸಾರ್ವಜನಿಕರಿಗೆ, ಸಮಸ್ತ ರೈತ ಬಾಂಧವರಿಗೆ ಮತ್ತು ಎಲ್ಲರಿಗೂ ಸ್ವಾಗತವನ್ನು ಕೋರಿದರು.

ಪರಿಸರ ಅಧಿಕಾರಿಗಳು, ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರು ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಶೆಳ್ಳಗಿ ಮರಳು ಬ್ಲಾಕ್‌ನಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ಕೃಷ್ಣಾ ನದಿ ತೀರದ ಎದುರಿನ ಸರ್ವೆ ನಂ. 126, 127, 128/2 & 129 ಶೆಳ್ಳಗಿ ಗ್ರಾಮ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆಯಲ್ಲಿ ಒಟ್ಟು 30.00 ಎಕರೆ ಪ್ರದೇಶದಲ್ಲಿ ಪ್ರತಿ ವರ್ಷಕ್ಕೆ 1,25,290 ಟನ್ ಸಾಮರ್ಥ್ಯದ ಮರಳು ಗಣಿಕಾರಿಕೆಯನ್ನು ಅರೆ-ಯಾಂತ್ರಿಕೃತ ಪದ್ಧತಿಯ (ಓಪನ್ ಕಾಸ್ಟ್ ಮೈನಿಂಗ್) ಪ್ರಕಾರ ಸ್ಥಾಪಿಸಲು ಉದ್ದೇಶಿಸಿರುವುದಕ್ಕೆ ಯಾದಗಿರಿ ಜಿಲ್ಲೆಗೆ ಸಂಬಂಧಿಸಿದಂತೆ, ಪ್ರಸ್ಥಾಪಿಸಿರುವ ಯೋಜನೆಯ ಕುರಿತಾದ ಹಾಗೂ ಪರಿಸರದ ಮೇಲೆ ಆಗುವ

ಪರಿಣಾಮಗಳ ಕುರಿತು ಸಾರ್ವಜನಿಕರಿಂದ ಅಹವಾಲುಗಳನ್ನು/ಸಲಹೆಗಳನ್ನು ಸ್ವೀಕರಿಸಲು, ದಿನಾಂಕ:17-06-2022ರಂದು ನಿಯೋಜಿತ ಸ್ಥಳ, ಶೆಳ್ಳಿಗಿ ಗ್ರಾಮದಲ್ಲಿ, ಮಧ್ಯಾಹ್ನ 1.00ಗಂಟೆಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಆಯೋಜಿಸಲಾಗಿದೆ ಎಂದು ತಿಳಿಸುತ್ತಾ ಜಿಲ್ಲೆಯ ವಿವಿಧ ಕಛೇರಿಗಳಾದ ಜಿಲ್ಲಾಧಿಕಾರಿಗಳ ಕಛೇರಿ, ಯಾದಗಿರಿ, ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿಗಳ ಕಾರ್ಯಾಲಯ ಜಿಲ್ಲಾ ಪಂಚಾಯತ್, ಯಾದಗಿರಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಯಾದಗಿರಿ, ತಾಲೂಕ ಕಾರ್ಯ ನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ್ ಸುರಪುರ, ಜಿಲ್ಲಾ ಕೈಗಾರಿಕಾ ಕೇಂದ್ರ ಯಾದಗಿರಿ, ಗ್ರಾಮ ಪಂಚಾಯತಿ ಕಾರ್ಯಾಲಯ ದೇವಾಪೂರ, ತಹಸೀಲ್ದಾರರು ಕಾರ್ಯಾಲಯ ಸುರಪುರ ಹಾಗೂ ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಯಾದಗಿರಿ ಇವರುಗಳ ಕಾರ್ಯಾಲಯದಲ್ಲಿ ಯೋಜನೆಯ ಕಾರ್ಯಾಕಾರಿ ಸಾರಾಂಶ (ಆಂಗ್ಲ ಮತ್ತು ಕನ್ನಡ ಭಾಷೆಗಳಲ್ಲಿ), ಅಡಕ ಮುದ್ರಿಕೆ ಮತ್ತು ವರದಿಗಳನ್ನು ಸಾರ್ವಜನಿಕರ ಪರಾಮರ್ಶೆಗಾಗಿ 30ದಿನಗಳ ಮುಂಚಿತವಾಗಿ ಇರಿಸಲಾಗಿತ್ತು ಎಂದು ತಿಳಿಸಿದರು ಹಾಗೂ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಅಧಿಸೂಚನೆಯನ್ನು ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ **"ಪ್ರಜಾವಾಣಿ"** ಹಾಗೂ **"ದಿ ಹಿಂದೂ"** ದಿ: 18-05-2022 ಮತ್ತು ಸ್ಥಳೀಯ ದಿನಪತ್ರಿಕೆಯಾದ **"ಕನ್ನಡಪ್ರಭ"** ಗಳಲ್ಲಿ ದಿ:19-05-2022ರಂದು ಅಧಿಸೂಚನೆಯ ಪ್ರಕಟಣೆಯನ್ನು ನೀಡಲಾಗಿತ್ತು ಹಾಗೂ ಸಾರ್ವಜನಿಕರಿಂದ ಅಹವಾಲುಗಳನ್ನು ಅಹ್ವಾನಿಸಲಾಗಿತ್ತು ಎಂದು ತಿಳಿಸುತ್ತಾ, ಸಭೆಯನ್ನು ಜರುಗಿಸಲು ಅನುಮತಿಸಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ವಿನಂತಿಸಿದರು.

ಸಭಾಧ್ಯಕ್ಷರು ಯೋಜನೆಯನ್ನು ಸಂಕ್ಷಿಪ್ತವಾಗಿ ಸಾರ್ವಜನಿಕರಿಗೆ ವಿವರಿಸಿ ಸಾರ್ವಜನಿಕರಲ್ಲಿ ಏನಾದರೂ ಸಲಹೆ, ಸೂಚನೆ, ಟೀಕೆ-ಟಿಪ್ಪಣಿ/ಅಹವಾಲುಗಳು ಇದ್ದಲ್ಲಿ ಮುಕ್ತವಾಗಿ ಲಿಖಿತ ರೂಪದಲ್ಲಾಗಲಿ ಅಥವಾ ಮೌಖಿಕವಾಗಿಯಾಗಲಿ ಸಭೆಯಲ್ಲಿ ಮಂಡಿಸುವಂತೆ ಹಾಗೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸುವಂತೆ ಸೂಚಿಸಿದರು.

ಸಭೆಯ ಆಧ್ಯಕ್ಷರು ಸಭೆಯನ್ನು ಉದ್ದೇಶಿಸುತ್ತಾ ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್‌ನವರ ತಾಂತ್ರಿಕ ಸಲಹೆಗಾರರಿಗೆ ಉದ್ದೇಶಿತ ಯೋಜನೆಯ ತಾಂತ್ರಿಕ ವಿವರಗಳನ್ನು ಸಭೆಗೆ ಮಂಡಿಸುವಂತೆ ಸೂಚಿಸಿದರು. ಅದರಂತೆ, ಯೋಜನೆಯ ತಾಂತ್ರಿಕ ಸಲಹೆಗಾರರು ಯೋಜನೆಗೆ ಸಂಬಂಧಿಸಿದ ಅಂಶಗಳನ್ನು ಸಭೆಯಲ್ಲಿ ಮಂಡಿಸಿದರು.

ಅದರಂತೆ ಸಭೆಯಲ್ಲಿ ಹಾಜರಿದ್ದ ಈ ಕೆಳಕಂಡ ಗ್ರಾಮಸ್ಥರು ತಮ್ಮ ಅಭಿಪ್ರಾಯಗಳನ್ನು ಈ ಕೆಳಗಿನಂತೆ ವ್ಯಕ್ತ ಪಡಿಸಿದರು:

1. <u>ಶ್ರೀ ಶಿವಪ್ಪ ತಂದೆ ಕಲ್ಲಪ್ಪ ಸಾ|| ಶೆಳ್ಳಿಗಿ ಗ್ರಾಮ :-</u> ಇವರು 6 ವರ್ಷಗಳಿಂದ ವ್ಯವಸಾಯ ಮಾಡುತ್ತಿದ್ದು, ಮರಳು ಗಣಿಗಾರಿಕೆಯಿಂದ ಉತ್ಪತ್ತಿಯಾಗುವ ಧೂಳಿನಿಂದ ತೊಂದರೆ ಉಂಟಾಗುತ್ತದೆ ಎಂದು ತಿಳಿಸಿ ಧೂಳು ನಿಯಂತ್ರಣ ಕ್ರಮಗಳನ್ನು ತೆಗೆದುಕೊಳ್ಳುವಂತೆ ಕೋರಿದರು.

➢ <u>**ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಧೂಳನ್ನು ನಿಯಂತ್ರಿಸುವುದಕ್ಕಾಗಿ ಯೋಜನೆದಾರರು ನೀರನ್ನು ಸಿಂಪಡಿಸುವ ಹಾಗೂ ಮತ್ತಿತರ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳುವಂತೆ ಹಾಗೂ ಸದರಿ ವಿಷಯದ ತಪಾಸಣೆಯನ್ನು ಮಾಲಿನ್ಯ ನಿಯಂತ್ರಣ ಮಂಡಳಿಯು ಪ್ರತಿ ತಿಂಗಳು ಮಾಡಬೇಕೆಂದು ಆದೇಶಿಸಿದರು ಹಾಗೂ ಸದರಿ ವಿಷಯವನ್ನು ಯೋಜನೆಗಾರರು ಅನುಸರಿಸುವುದಾಗಿ ಅಧ್ಯಕ್ಷರಿಗೆ ತಿಳಿಸಿದರು.**</u>

2. ಶ್ರೀ ಮಲ್ಲಿಕಾರ್ಜುನ ತಂದೆ ಅಮರಣ್ಣ ಸಾ॥ ಶೆಳ್ಳಗಿ ಗ್ರಾಮ :- ಇವರು ಮಾತನಾಡುತ್ತಾ ಮಳೆ ಬಂದರೆ ಮಾತ್ರ ತಮಗೆ ಅನುಕೂಲವಾಗುತ್ತಿತ್ತು ಮತ್ತು 4 ವರ್ಷಗಳಿಂದ ಬೊರವೆಲ್ ಸಹ ಕೆಟ್ಟಿರುವುದರಿಂದ ಹತ್ತಿ ಬೆಳೆಯು ಹಾನಿಯಾಗಿರುವುದಾಗಿ ತಿಳಿಸುತ್ತಾ ಮಳೆ ಬಾರದ ಪಕ್ಷದಲ್ಲಿ ತಮಗೆ ತೊಂದರೆಯಾಗುವುದರಿಂದ ಪರಿಹಾರವನ್ನು ನೀಡಬೇಕೆಂದು ಕೋರಿದರು ಹಾಗೂ ರಸ್ತೆ ಇಲ್ಲದಿರುವುದರಿಂದ ತೊಂದರೆಯಾಗುತ್ತಿರುವುದಾಗಿ ತಿಳಿಸಿದರು.

➢ ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಸದರಿ ವಿಷಯದ ಕುರಿತಾಗಿ ಸಮಸ್ಯೆಯನ್ನು ಕ್ಷೀಣಿಸುವ ಕ್ರಮಗಳನ್ನು ಅನುಸರಿಸುವಂತೆ ಯೋಜನೆದಾರರಿಗೆ ಸೂಚಿಸಿದರು.

3. ಶ್ರೀ ಭೀಮನಗೌಡ ಪೂಜಾರಿ ಸಾ॥ ಶೆಳ್ಳಗಿ ಗ್ರಾಮ: ಇವರು ಮಾತನಾಡುತ್ತಾ ರಾತ್ರಿ ವೇಳೆಯಲ್ಲಿ ಮರಳನ್ನು ಸಾಗಿಸುವ ವಾಹನಗಳಿಂದ ಧೂಳು ರಸ್ತೆ ಬದಿಯಲ್ಲಿರುವ ಹೊಲಗಳಿಗೆ ಹಾಗೂ ಮರಳನ್ನು 24ತಾಸು ಸಾಗಿಸುವುದರಿಂದ ಧೂಳು ಹೊಲದಲ್ಲಿ ಆವರಿಸಿ ಬೆಳೆಗೆ ತೊಂದರೆಯಾಗುತ್ತಿದೆ ಹಾಗೂ ತಮಗೆ ಮರಳನ್ನು ಮನೆಗೆ ಹಾಕುವುದಿಕ್ಕೆ ಬಿಡುವುದಿಲ್ಲವೆಂದು ದೂರಿದರು. ರಾತ್ರಿ ಇಡಿ ಟಿಪ್ಪರ್‌ಗಳನ್ನು ಓಡಿಸುವುದರಿಂದ ರಸ್ತೆಯ ಪಕ್ಕದಲ್ಲಿ ಇರುವ ಮನೆಯವರಿಗೆ ಧೂಳು ಅನಾರೋಗ್ಯವನ್ನುಂಟು ಮಾಡಿ ಊಟ ಮಾಡಲಿಕ್ಕೆ ಸಹ ತೊಂದರೆಯಾಗುತ್ತಿದೆ ಹಾಗೂ ಎಷ್ಟು ಕೇಳಿದರೂ ಸಹ ತಮ್ಮ ಟ್ರ್ಯಾಕ್ಟರ್‌ಗಳಲ್ಲಿ ಇರುವ ಮರಳನ್ನು ಕೊಡುವುದಿಲ್ಲವೆಂದು ತಿಳಿಸಿದರು ಹಾಗೂ ತಮ್ಮ ಟ್ರ್ಯಾಕ್ಟರ್‌ಗಳಲ್ಲಿ ಸಾಗಾಣಿಕೆ ಮಾಡಿದಾಗ ಪೋಲಿಸರು ಹಾಗೂ ಸರ್ಕಲ್‌ಗಳು ವಾಹನಗಳನ್ನು ಹಿಡಿಯುತ್ತಾರೆಂದು ತಿಳಿಸುತ್ತಾ ಶೆಳ್ಳಗಿಯಲ್ಲಿ ಮರಳನ್ನು ಮಾರಾಟ ಮಾಡುವುದಕ್ಕಿಂತ ಮರಳನ್ನು ಮನೆ ನಿರ್ಮಿಸುವುದಕ್ಕೆ ನೀಡಿದರೆ ಸಾಕೆಂದು ಮನವಿ ಮಾಡಿದರು ಹಾಗೂ ಆಶ್ರಯ ಮನೆಗಳಿಗೆ ಅವಶ್ಯವಿರುವ ಒಂದು ಟಿಪ್ಪರ ಮರಳನ್ನು ಸಹ ಸಾಗಿಸುವುದಿಲ್ಲವೆಂದು ದೂರಿದರು.

➢ ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಈಗಾಗಲೇ ಯೋಜನೆದಾರರು ಬೆಳಗ್ಗೆ 6ಗಂಟೆಯಿಂದ ಸಾಯಂಕಾಲ 6ಗಂಟೆಯವರೆಗೆ ಮರಳನ್ನು ಸಾಗಿಸುವ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ರಾತ್ರಿ ವೇಳೆಯಲ್ಲಿ ಮರಳು ಸಾಗಾಣಿಕೆಯನ್ನು ಮಾಡತಕ್ಕದ್ದಂದು ಹಾಗೂ ಸ್ಥಳೀಯ ಸಮಸ್ಯೆಗಳಿಗೆ ಮತ್ತು ಸ್ಥಳೀಯರಿಗೆ ಆದ್ಯತೆ ನೀಡುವ ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದಾಗಿ ತಿಳಿಸುತ್ತಾ ಜಿಲ್ಲೆಯಲ್ಲಿ ಟಾಸ್ಕ್‌ಫೋರ್ಸ ಸಮಿತಿ ಇದ್ದು, ಇದನ್ನು ಕಟ್ಟು ನಿಟ್ಟಾಗಿ ಜಾರಿಗೆ ತರುವಂತೆ ಸೂಚಿಸುವುದಾಗಿ ತಿಳಿಸಿದರು.

4. ಶ್ರೀ ಪ್ರಾಣೇಶ ಕುಲಕರ್ಣಿ ಸಾ॥ ಶೆಳ್ಳಗಿ ಗ್ರಾಮ: ಇವರು ಮಾತನಾಡುತ್ತಾ ಇಲ್ಲಿಯ ತನಕ 10ವರ್ಷ ಗಣಿಗಾರಿಕೆ ಶುರುವಾಗಿದ್ದರೂ ಸಹ ಜನರ ಕುಂದು-ಕೊರತೆಗಳನ್ನು ಆಲಿಸಲು ಯಾವುದೇ ಕಾರ್ಯಕ್ರಮ ಮಾಡಿರುವುದಿಲ್ಲ ಆದರೆ, ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಇತರೆ ಅಧಿಕಾರಿಗಳು ಬಾಗವಹಿಸಿದ್ದಕ್ಕೆ ಸಂತೋಷದ ವಿಷಯವೆಂದು ತಿಳಿಸಿದರು ಮುಂದುವರೆದು 8 ರಿಂದ 9ವರ್ಷಗಳಿಂದ ಶೆಳ್ಳಗಿ ಕ್ರಾಸ್‌ನಿಂದ ಶೆಳ್ಳಗಿಯವರೆಗೆ ರಸ್ತೆ ಉತ್ತಮವಾಗಿ ಇಲ್ಲದಿರುವುದರಿಂದ ಕಳೆದ ವರ್ಷ ಒಬ್ಬ ರೈತ ಬಸ್ಸ್ ಪಲ್ಟಿಯಾಗಿ ಸಾವನ್ನಪ್ಪಿರುತ್ತಾರೆ ಮತ್ತು ರಸ್ತೆಯಲ್ಲಿ ತೆಗ್ಗು ಕುಣಿ ಇದ್ದು, ದಿನಂ ಪ್ರತಿ ತಮಗೂ ಸಹ ಬಿದ್ದು ಗಾಯವಾಗಿರುವುದಾಗಿ ತಿಳಿಸುತ್ತಾ ರಸ್ತೆಯನ್ನು

ಸುಧಾರಿಸಿ ಗಣಿಗಾರಿಕೆಯನ್ನು ಶುರು ಮಾಡಲು ತಿಳಿಸಿದರು ಹಾಗೂ ಗ್ರಾಮದಿಂದ ಸುರಪುರಕ್ಕೆ ತೆರಳಲು ಸುಮಾರು 5ಕಿಮೀ ಸುತ್ತಬೇಕೆಂದು ತಿಳಿಸಿದರು.

➤ ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಗ್ರಾಮದ ಶೆಳ್ಳಗಿ ಕ್ರಾಸ್‌ನಿಂದ ರಸ್ತೆಯನ್ನು ಸರಿ ಮಾಡುವ ವಿಷಯವನ್ನು ದಾಖಲಿಸುವುದಾಗಿ ತಿಳಿಸಿದರು.

5. ಶ್ರೀ ಶರಣಬಸವ ಸಾ॥ ಶೆಳ್ಳಗಿ ಗ್ರಾಮ: ಇವರು ಮಾತನಾಡುತ್ತಾ ಸದರಿ 30 ಎಕರೆ ಜಮೀನಿನಲ್ಲಿ ಮರಳು ಗಣಿಗಾರಿಕೆಯನ್ನು ನಡೆಸಲು ಒಪ್ಪಿಗೆಯನ್ನು ಪಡೆದಿದ್ದಿರಾ ಇಲ್ಲವೇ ಜನರ ಅನುಮತಿಯನ್ನು ಪಡೆಯಲು ಬಂದಿದ್ದೀರಾ ಇಲ್ಲಾ ಜನರಿಗೆ ಮಾಹಿತಿಯನ್ನು ನೀಡಲು ಬಂದಿದ್ದೀರಾ ಎಂದು ಸಭೆಗೆ ಪಶ್ನಿಸಿದರು.

➤ ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಕೇಂದ್ರ ಪರಿಸರ ಆಘಾತ ಅಧ್ಯಾಯನದ ಅಧಿಸೂಚನೆಯ ಪ್ರಕಾರ ಸಾರ್ವಜನಿಕರ ಅಭಿಪ್ರಾಯವನ್ನು ಸಂಗ್ರಹಿಸಿ ಮುಂದಿನ ಕ್ರಮಕ್ಕಾಗಿ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸುವುದಕ್ಕಾಗಿ ಈ ಸಭೆಯನ್ನು ಆಯೋಜಿಸಿರುವುದಾಗಿ ತಿಳಿಸಿದರು.

ಮುಂದುವರೆದು ಗ್ರಾಮದವರು ಬೇಡವೆಂದರೆ ಗಣಿಗಾರಿಕೆಯನ್ನು ನಿಲ್ಲುಸುತ್ತಿರಾ ಎಂದು ಕೇಳುತ್ತಾ ಜನರನ್ನು ಉದ್ದೇಶಿಸಿ ಇಲ್ಲಿ ಶೆಳ್ಳಗಿ ಮತ್ತು ಸುತ್ತಮುತ್ತಲಿನ ಗ್ರಾಮದವರು ಇದ್ದೀರಿ ಹಾಗೂ ಗ್ರಾಮಕ್ಕೆ ಈ ಯೋಜನೆ ಬೇಕೊ ಬೇಡವೆಂದು ಸಾರ್ವಜನಿಕರಿಗೆ ತಿಳಿಸುತ್ತಾ, ಮರಳು ಗಣಿಗಾರಿಕೆ ನಡೆಯಬಾರದೆಂದು ಯಾರು ಹೇಳುತ್ತಿಲ್ಲಾ ಏಕೆ? ಎಂದು ತಿಳಿಸಿದರು. ಇವರು ಗಮನಿಸಿರುವಂತೆ ಸುಮಾರು 9 ವರ್ಷಗಳಿಂದ ಮರಳು ಗಣಿಗಾರಿಕೆ ನಡೆಯುತ್ತಿದೆ ಎಂದು ತಿಳಿಸುತ್ತಾ ತಾವು ನೋಡಿದ ಪ್ರಕಾರ ಸುಮಾರು 09ವರ್ಷಗಳಿಂದ ಮರಳು ಗಣಿಗಾರಿಕೆ ನಡೆಯುತ್ತಿದ್ದು, ರಸ್ತೆ ಕೂಡ ಚೆನ್ನಾಗಿಲ್ಲ ದಿನಂ ಪ್ರತಿ ಒಬ್ಬರಲ್ಲೊಬ್ಬರು ಬೀಳುತ್ತೀದ್ದು, ಅವರ ದೊಡ್ಡಪ್ಪ ಕಳೆದ ವರ್ಷ ಬಸ್ ಪಲ್ಟಿಯಾಗಿ ಸಾವನ್ನಪ್ಪಿರುತ್ತಾರೆ ಹಾಗೂ ಇಂತಹ ರಸ್ತೆಯಲ್ಲಿ ಗರ್ಬಿಣಿ ಮತ್ತು ಹೆಣ್ಣು ಮಕ್ಕಳು ಶಾಲೆಗೆ ಹೊಗುವುದು ಹೇಗೆ? ಹಾಗೂ ಎಲ್ಲಾ ಶಾಲೆ ಮಕ್ಕಳು ತಾಲ್ಲೂಕಿನಲ್ಲಿ ವಿಧ್ಯಾಭ್ಯಾಸ ಮಾಡುತ್ತಿದ್ದು, ರಸ್ತೆಯನ್ನು ಕಳೆದ 9ವರ್ಷಗಳಿಂದ ನಿರ್ಮಿಸಿಲ್ಲ ಏಕೆ? ಎಂದು ಅಧ್ಯಕ್ಷರಿಗೆ ಪ್ರಶ್ನಿಸಿದರು ಹಾಗೂ ಸ್ಥಳೀಯ ಆಡಳಿತವು ಏಕೆ ರಸ್ತೆ ನಿರ್ಮಿಸಿಲ್ಲವೆಂದು ಕೇಳಿದರು. ಸುತ್ತಮುತ್ತಲಿನ ಗ್ರಾಮಸ್ಥರು ಹತ್ತಿ ಬೆಳೆಯನ್ನು ಬೆಳೆಯುತ್ತಿದ್ದು, ಮರಳನ್ನು ದಯಾ-ದಾಕ್ಷಿಣ್ಯ ಇಲ್ಲದೆ ಸಾಗಾಣೆ ಮಾಡುವುದರಿಂದ ಹತ್ತಿಗೆ ಧೂಳು ಬಿದ್ದು, ಅಂತಹ ಹತ್ತಿಯ ಬಣ್ಣ ಬದಲಾಗಿ ರೈತರಿಗೆ ಮಾರುಕಟ್ಟಯಲ್ಲಿ ಸರಿಯಾದ ಬೆಲೆ ಸಿಗುವುದಿಲ್ಲವೆಂದು ಹಾಗೂ ಸಾರ್ವಜನಿಕರು ಅಂತಹ ವಾಹನವನ್ನು ನಿಲ್ಲಿಸಿ ನೀರನ್ನು ಸಿಂಪಡಿಸಿ ಎಂದು ಗುತ್ತಿಗೆದಾರರಿಗೆ ತಿಳಿಸಿದಾಗ ಅದೇ ಗ್ರಾಮದ ಮತ್ತೊಬ್ಬರು ವಾಹನವನ್ನು ಏಕೆ ನಿಲ್ಲಿಸುತ್ತಿರಾ? ಎಂದು ಕೂಗಾಡುತ್ತಾರೆ ಇದನ್ನು ಕಣ್ಣಾರೆ ನೋಡಿದ್ದೇನೆ ಎಂದು ತಿಳಿಸುತ್ತಾ ಇಂತಹ ಪರಿಸ್ಥಿತಿಯು ಜನರ ಹಾಗೂ ರೈತರದಾಗಿದ್ದು, ಅವರು ಏನು ಮಾತನಾಡಲಾಗುತ್ತಿಲ್ಲವೆಂದು ತಿಳಿಸಿದರು. ಸುರಪುರ ತಾಲ್ಲೂಕಿನ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಎಂದು ಪ್ರಶಿಸುತ್ತಾ ಸುಪ್ರೀಂ ಕೋರ್ಟ್ ಹೇಳಿದ ಪ್ರಕಾರ ಹಳ್ಳಿಯವರು ಮನೆ ನಿರ್ಮಾಣ ಮಾಡಲು ಟ್ರ್ಯಾಕ್ಟರ್‌ಗಳಲ್ಲಿ ಮರಳನ್ನು ಸಾಗಿಸಬಹುದು ಎಂದು ತಿಳಿಸಿದರು.

ಆದರೆ ಈ ಹಳ್ಳಿಯವರಿಗೆ ಒಂದು ಟ್ರ್ಯಾಕ್ಟರ ಮರಳನ್ನು ಸಹ ಸಾಗಿಸಲು ಬಿಡುವುದಿಲ್ಲವೆಂದು ಆಕ್ಷೇಪಿಸುತ್ತಾ ಬೇರೆಯವರು ಕಾನೂನು ಬಾಹಿರವಾಗಿ ರಾತ್ರಿಯಿಡಿ ಮರಳನ್ನು ಸಾಗಿಸುತ್ತಾರೆ ಮತ್ತು ಇದನ್ನು ಯಾವೊಬ್ಬ ಅಧಿಕಾರಿ ಕೂಡ ಪ್ರಶ್ನಿಸುವುದಿಲ್ಲ. ಹಾಗಾದರೆ ಅಧಿಕಾರಿಗಳಿಗೆ ಬೇಕಾಗಿಲ್ವಾ? ಸರ್ಕಾರಕ್ಕೆ ಟ್ಯಾಕ್ಸ್ ಬರುವುದು ಬೇಡ್ವ? ಈ ಅನಧಿಕೃತ ವಿಷಯವನ್ನು

ತಹಸೀಲ್ದಾರರು ಸುರಪುರ ಇವರಿಗೆ ಮೌಖಿಕವಾಗಿ ತಿಳಿಸಿದಾಗ ತಹಸೀಲ್ದಾರರು ಲಿಖಿತ ಪತ್ರ ಬರೆದು ಕೊಡುವಂತೆ ಸೂಚಿಸಿರುತ್ತಾರೆ ಹಾಗೂ ತಾವುಗಳು ಕೆಲಸದಲ್ಲಿ ತುಂಬಾ ನಿರತರಾಗಿದ್ದ ಕಾರಣ ಪತ್ರ ಬರೆದು ಕೊಡಲು ಆಗಿಲ್ಲವೆಂದು ತಿಳಿಸುತ್ತಾ ತಾವೊಬ್ಬ ಸಾಫ್ಟವೇರ ಇಂಜಿನಿಯರ್ ಆಗಿರುವುದರಿಂದ ಒಂದು ದಿನದ ರಜೆಯನ್ನು ಪಡೆದುಕೊಂಡು ಬಂದಿರುವುದಾಗಿ ತಿಳಿಸಿದರು.

ಮುಂದುವರೆಯುತ್ತಾ, ಗ್ರಾಮದ ಪ್ರತಿಯೊಬ್ಬರು ಅನಾರೋಗ್ಯಕಿಡಾಗಿ ಸುರಪುರ ತಾಲ್ಲೂಕಿನ ಡಾಕ್ಟರ್‌ಕೂಡ ನೀವು ಶೆಳ್ಳಗಿಯವರೇ ಎಂದು ಕೇಳುತ್ತಾ ನಿಮ್ಮ ಊರಿನಲ್ಲಿ ಏನೊ ಸಮಸ್ಯೆ ಇರುವುದು ಹಾಗೂ ಗ್ರಾಮಾದವರು ಎಲ್ಲರೂ ಒಂದೇ ರೋಗಕ್ಕೆ ತುತ್ತಾಗುತ್ತಿದ್ದಿರಿ ಹಾಗೂ ಈ ಮರಳು ಗಣಿಗಾರಿಕೆಯಿಂದ ಪ್ರತಿಯೊಬ್ಬರ ಮನೆಯಲ್ಲಿ, ಬಟ್ಟೆಯ ಮೇಲೆ ಹಾಗೂ ಕುಡಿಯುವ ನೀರಿನಲ್ಲಿ ಧೂಳು ಸುಮಾರು 9ವರ್ಷಗಳಿಂದ ಬಿಳುತ್ತಿರುವುದು ಕಾರಣವೆಂದು ತಿಳಿಸುತ್ತಾ ಸದರಿ ಸಮಸ್ಯೆಗೆ ಪರಿಹಾರವೇನು ಎಂದು ಪ್ರಶ್ನಿಸಿದರು ಹಾಗೂ ಯಾರು ಸಹ ಕಾಳಜಿಯನ್ನು ತೆಗೆದುಕೊಂಡಿಲ್ಲವೆಂದು ತಿಳಿಸಿದರು.

ಮುಂದುವರೆಯುತ್ತಾ ಅನಾರೋಗ್ಯದ ವಿಷಯವು ಗಣಿಗಾರಿಕೆಯಿಂದ ಅಲ್ಲದಿದ್ದರೂ ಸಹ, ಗ್ರಾಮಸ್ಥರ ಆರೋಗ್ಯದ ವಿಷಯವು ಪ್ರಥಮ ಆಧ್ಯತೆಯಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು. ಸಾಗಾಣಿಕೆಯ ಬೃಹತ್ ವಾಹನಗಳ ಓಡಾಟದಿಂದ ಮಕ್ಕಳಿಗೆ ಓದಲು ತುಂಬಾ ತೊಂದರೆಯಾಗುತಿರುವುದಕ್ಕೆ ಪರಿಹಾರವೇನೆಂದು ಪ್ರಶ್ನಿಸಿದರು ಹಾಗೂ ಮೊದಲೆ ಹೇಳಿದಂತೆ ವಾಹನವನ್ನು ನಿಲ್ಲಿಸಿದಾಗ ಗ್ರಾಮಸ್ಥರಲ್ಲಿ ಕಲಹ ಉಂಟಾಗುತ್ತಿದ್ದು, ಅದಕ್ಕೆ ಅಧ್ಯಕ್ಷರೇ ಜವಬ್ದಾರಿ ತೆಗೆದುಕೊಳ್ಳಬೆಕೆಂದು ಕೋರುತ್ತಾ ಇದಕ್ಕೆಲ್ಲ ಪರಿಹಾರ ಇಲ್ಲವೆಂದರೆ, ಧಾರ್ಮಿಕ ದಂಗೆಗಳು ಉಂಟಾಗುವ ಸಾಧ್ಯತೆ ಇದ್ದು ಅವಾಚ್ಯ ಶಬ್ದಗಳನ್ನು ಉಪಯೋಗಿಸುವುದರಿಂದ ಗಲಾಟೆಗಳು ಆಗುವ ಸಂಭವವಿದೆ ಎಂದು ತಿಳಿಸಿದರು. ಪೋಲಿಸರು ಸರಿಯಾಗಿ ಕರ್ತವ್ಯ ನಿರ್ವಹಿಸುತ್ತಿಲ್ಲವೆಂದು ತಿಳಿಸುತ್ತಾ ಈ ಮೇಲ್ಕಾಣಿಸಿದ ಅಂಶಗಳ ಹಿನ್ನಲೆಯಲ್ಲಿ ಸದರಿ ಮರಳು ಗಣಿಗಾರಿಕೆಯನ್ನು ಸ್ಥಗಿತಗೊಳಿಸುವುದು ಸೂಕ್ತವೆಂದು ಅಭಿಪ್ರಾಯ ಪಟ್ಟರು ಹಾಗೂ ಈ ಯೋಜನೆಯಿಂದ ಯಾರಿಗೆ ಲಾಭವಾಗುತ್ತೊ ಬಿಡುತ್ತೊ ತಮಗಂತು ಅನ್ಯಾಯವಾಗುತ್ತದೆ ಎಂದು ಜನರನ್ನು ಉದ್ದೇಶಿಸಿ ಮಾತನಾಡುತ್ತ ಗ್ರಾಮಸ್ಥರು ಇಲ್ಲಿ ಬಂದು ತಮ್ಮ ಅನಿಸಿಕೆಗಳನ್ನು ತಿಳಿಸಬೇಕೆಂದು ಗ್ರಾಮಸ್ಥರಿಗೆ ಮನವಿ ಮಾಡಿದರು.

- <u>ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಸದರಿ ವಿಷಯವನ್ನು ಜಿಲ್ಲೆಯ ಟಾಸ್ಕ್‌ಫೋರ್ಸ ಸಮಿತಿ ಹಾಗೂ ತಾಲ್ಲೂಕು ಮಟ್ಟದ ಟಾಸ್ಕ್‌ಫೋರ್ಸ ಸಮಿತಿಗಳಿಗೆ ಸದರಿ ವಿಷಯವನ್ನು ಕಟ್ಟು ನಿಟ್ಟಾಗಿ ಪಾಲಿಸುವಂತೆ ಸೂಚಿಸುವುದಾಗಿ ತಿಳಿಸಿದರು. ಸದರಿಯವರು ನೀಡಿದಂತಹ ಒಳ್ಳೆಯ ಸಲಹೆಗಳಿಗೆ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸಂಬಂಧಿಸಿದವರಿಗೆ ಸೂಚಿಸುವುದಾಗಿ ತಿಳಿಸಿದರು ಹಾಗೂ ಆರೋಗ್ಯದ ವಿಷಯಕ್ಕೆ ಸಂಬಂಧಿಸಿದಂತೆ ಆಸ್ಪತ್ರೆಗಳಿಗೆ ಸೂಕ್ತ ತಪಾಸಣೆ ಮತ್ತು ಮುಂಜಾಗ್ರತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸೂಚಿಸುವುದಾಗಿ ತಿಳಿಸಿದರು. ಸದರಿಯವರಿಗೆ ಲಿಖಿತವಾಗಿ ಸಲ್ಲಿಸುವಂತೆ ಸೂಚಿಸುತ್ತಾ ಈ ವಿಷಯವಾಗಿ ಪ್ರತ್ಯೇಕ ಸಮಯವನ್ನು ನೀಡುವುದಾಗಿ ತಿಳಿಸಿದರು ಹಾಗೂ ಗ್ರಾಮದಲ್ಲಿನ ಎಷ್ಟೆ ದೊಡ್ಡ ವ್ಯಕ್ತಿಯಾದರೂ ಸಹ ಗ್ರಾಮದಲ್ಲಿ ಧಾರ್ಮಿಕ ದಂಗೆಗಳನ್ನು ಏಳಲು ಜಿಲ್ಲಾಡಳಿತದಿಂದ ಬಿಡುವುದಿಲ್ಲವೆಂದು ತಿಳಿಸುತ್ತಾ ಸದರಿಯವರ ಅನಿಸಿಕೆಗಳನ್ನು ದಾಖಲಿಸುವುದಾಗಿ ತಿಳಿಸಿದರು.</u>



ಶಾಹಿಸ್ತ

6. **ಶ್ರೀ ಮೌನೇಶ ಇಳಗಿ ತಡಕಲ್ ಸಾ|| ಶೆಳ್ಳಗಿ ಗ್ರಾಮ:** ಇವರು ಮಾತನಾಡುತ್ತಾ ಶರಣಬಸವ ಹೆಸರು ಪ್ರಸ್ತಾಪ ಪಡಿಸಿ ನೀರು ಸಿಂಪರಣೆ ಮಾಡಿ ಎಂದು ಎಚ್ಚರಿಸಿದ ಮೊದಲನೆ ದಿನ ನೀರನ್ನು ಸಿಂಪರಣೆ ಮಾಡುತ್ತಾರೆ ಮತ್ತೆ ಮುಂದಿನ ನಾಲ್ಕೈದು ದಿನ ನೀರನ್ನು ಸಿಂಪರಣೆ ಮಾಡುವುದಿಲ್ಲವೆಂದರು ಶೆಳ್ಳಗಿ ಹನುಮನ ದೇವಸ್ಥಾನದಿಂದ ಚೆಕ್ ಪೋಸ್ಟ್‌ವರೆಗೆ ಸಿ.ಸಿ. ರಸ್ತೆ ನಿರ್ಮಿಸಬೇಕು ಯಾಕೆಂದರೆ ಸಿ.ಸಿ. ರಸ್ತೆ ನೀರನ್ನು ಸಿಂಪರಣರ ಮಾಡಿದರೆ ಉತ್ತಮವಾಗಿರುತ್ತದೆ ಅದೇ ಡಾಂಬರ್ ರಸ್ತೆ ನೀರು ಸಿಂಪರಣೆ ಮಾಡಿದರೆ ರಸ್ತೆ ದುರಸ್ಥಿಯಾಗುವ ಸಂಬವವಿರುತ್ತದೆ ಎಂದು ತಿಳಿಸಿದರು ಹಾಗೂ ನಮ್ಮ ಅಭಿಪ್ರಯಾದ ಪ್ರಕಾರ ಮರಳು ಗಣಿಗಾರಿಕೆಯನ್ನೆ ನಡೆಸಬಾರದು ಆದರೆ ಈಗಾಗಲೇ ಸರ್ಕಾರ ಇದಕ್ಕೆ ಅನುಮತಿ ನೀಡಿದ್ದರಿಂದ ನಾವು ಎಷ್ಟೇ ಮುಷ್ಕರ ಮಾಡಿದರು ಸಹಿತ ಇದನ್ನು ನಮ್ಮಿಂದ ತಡೆಯಲು ಸಾದ್ಯವಾಗುವುದಿಲ್ಲ ಹಾಗೂ ರಸ್ತೆಯ ಅಕ್ಕ-ಪಕ್ಕದ ಮನೆಗೆ ತೊಂದರೆಯಾಘಬಾರದೆಂದು ತಿಳಿಸಿದರು.

➢ <u>ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಕಾಯ್ದೆ ಪ್ರಕಾರ ಬೆಳಗ್ಗೆ 6ಗಂಟೆಯಿಂದ ಸಾಯಂಕಾಲ 6ಗಂಟೆಯವರೆಗೆ ಮರಳನ್ನು ಸಾಗಿಸುವ ನಿಯಮವಿರುತ್ತದೆ ಎಂದು ತಿಳಿಸಿದರು.</u>

ಮುಂದುವರೆಯುತ್ತಾ ರಾತ್ರಿಯಿಂದ ಮುಂಜಾನೆಯವರೆಗೆ ಸುಮಾರು 300ಟಿಪ್ಪರ ಮರಳನ್ನು ಸಾಗಿಸುತ್ತಾರೆ ಇದರ ವಿರುದ್ಧ ಯಾರಿಗೆ ದೂರನ್ನು ನೀಡಬೇಕು ಎಂದು ಪ್ರಶ್ನಿಸಿದರು.

7. **ಶ್ರೀ ಅಂದಾನಯ್ಯ ಪಾಟೀಲ್ ಸಾ|| ಶೆಳ್ಳಗಿ ಗ್ರಾಮ** ಇವರು ಮಾತನಾಡುತ್ತಾ ಅಧ್ಯಕ್ಷರ ಬಗ್ಗೆ ಪ್ರಸ್ಥಾಪಿಸಿ ಅವರು ಕಷ್ಟಪಟ್ಟು ಓದಿ ಬಂದಿದ್ದು, ಅವರು ಈ ಸಭೆಯಲ್ಲಿರುವುದು ನಮಗೆ ಸಂತಸ ಆಗಿದೆ ಎಂದರು ಮುಂದುವರೆದು ಪೋಲಿಸರು ಈ ಗ್ರಾಮ ಮತ್ತು ಪಕ್ಕದ ಗ್ರಾಮ ಮನೆ ನಿರ್ಮಿಸಲು ತಕರಾರು ಮಾಡಬಾರದೆಂದರು ಮತ್ತು ಬಡವರು ನಿವೇಶನ ನಿರ್ಮಿಸಲು ಕಮಿಷನ್ ಕೇಳಬಾರದು ಯಾಕೆಂದರೆ ಸರ್ಕಾರ 1 ರಿಂದ 1.5ಲಕ್ಷ ಮನೆ ನಿರ್ಮಿಸಲು ನೀಡುತ್ತಿದ್ದು ಅದರಲ್ಲಿ 2ಟ್ರೀಪ್ ಮರಳಿಗೆ 60 ಸಾವಿರ ರೂಪಾಯಿ ಕೇಳಿದರೆ ಹೇಗೆ ಎಂದು ಪ್ರಶ್ನಿಸಿದರು ಹಾಗು ಹನುಮಂತ ದೇವಸ್ಥಾನದಿಂದ ಶೆಳ್ಳಗಿ ಗ್ರಾಮದವರೆಗೆ 6ಕೀಮಿ ಇದ್ದು, ಇಲ್ಲಿ ಡಾಂಬರಿಕರಣ/ಸಿ.ಸಿ.ರಸ್ತೆ ನಿರ್ಮಿಸಲು ಮಾಡಬೇಕೆಂದು ಒತ್ತಾಯಿಸಿದರು ಮತ್ತು ನಡು ಊರಲ್ಲಿರುವ ರಸ್ತೆ ಹದೆಗೆಟ್ಟಿದ್ದು, ಇದನ್ನು ಜೀವ ಭಯ ಕಾಡುತ್ತಿದ್ದು, ಅದನ್ನು ಅತಿ ಶೀಘ್ರದಲ್ಲಿ ನಿರ್ಮಿಸಿ ಅಭಿವೃದ್ಧಿ ಗ್ರಾಮವನ್ನಾಗಿ ಮಾಡಿ ಕೊಡಬೇಕೆಂದು ವಿನಂತಿಸಿದರು ರಸ್ತೆಯನ್ನು ಬಾಗಲಕೋಟ ಮಾದರಿಯಲ್ಲಿ ನಿರ್ಮಿಸಿಕೊಡಬೆಕೇಂದರು.

ಇಲ್ಲಿ ಪೂರ ಬಡರೈತರಿದ್ದು, ಧೂಳು ತುಂಬಿರುವ ಹತ್ತಿ ಬೆಲೆಗೆ 25 ರಿಂದ 26ಸಾವಿರ ಬೆಲೆ ಇದ್ದು, ಬೇರೆ ಕಡೆ ಉತ್ತಮ ಹತ್ತಿಗೆ 33 ರಿಂದ 35ಸಾವಿರ ಬೆಲೆಯಿದ್ದು, ಇಲ್ಲಿಯ ರೈತರಿಗೆ ತುಂಬಾ ನಷ್ಟವಾಗಿ ರೈತನು ಆತ್ಮಹತ್ಯ ಮಾಡಿಕೊಂಡು ಅವರ ಕುಟುಂಬ ಬೀದಿಗೆ ಬರುವುದು ಸಾಮಾನ್ಯವಾಗಿದೆ ಹಾಗೂ ಸರ್ಕಾರ ಎಲ್ಲರಿಗೂ ಪರಿಹಾರ ಕೊಡುವುದಕ್ಕೆ ಸಾದ್ಯವಾಗುವುದಿಲ್ಲ ಹಾಗಾಗಿ ಶಾಸ್ವತ ಪರಿಹಾರ ಕೊಡಬೆಕೇಂದು ಕೇಳಿಕೊಂಡರು. ರಸ್ತೆಯಲ್ಲಿ ಗುಂಡಿಗಳು ತುಂಬಾ ಆಳವಾಗಿದ್ದು ಒಬ್ಬ ವೃದ್ಧ ಅದರಲ್ಲಿ ಬಿದ್ದು ಗಾಯಗೊಂಡು ಅದಕ್ಕೆ ನಾನೇ ರೂ. 250/- ಖರ್ಚು ಮಾಡಿ ಆಸ್ಪತ್ರೆಯಲ್ಲಿ ಉಪಚರಿಸಿ ಬಂದಿದ್ದುಂಟು ಎಂದರು ಆದರೆ ನೀವು ಮರಳುಗಾರಿಕೆ ರಾತ್ರಿ ಮತ್ತು ಹಗಲು ನಡೆಸಿ ಆದರೆ, ನೀರನ್ನು ನಿರಂತರ ಸಿಂಪಡಿಸಬೇಕೆಂದು ಆಗ್ರಹಿಸಿದರು. ಇದಕ್ಕೆ ಗ್ರಾಮಸ್ಥರಿಂದ ವಿರೋದವಾದಾಗ ಸಮಜಾಯಿಷಿ ಜನರಗೊಂದಲದ ನಡುವೆ ಸ್ವಲ್ಪವು ಕೂಡ ಧೂಳು ಬರದೆ ಹಾಗೆ ಮರಳುಗಾರಿಕೆಯನ್ನು ನಡೆಸಿ ಎಂದರು. ಮುಂದುವರೆದು ನಾನು ಕೂಡ

ಒಬ್ಬ 120 ಎಕರೆ ನೀರಾವರಿ ಜಮೀನು ಇರುವ ರೈತನಾಗಿದ್ದು ಅಂತಃಕರಣಿಯಾದ ಅಧ್ಯಕ್ಷರನ್ನು ಪ್ರಸ್ತಾಪಿಸಿ ಬಡ ಮತ್ತು ರಸ್ತೆಯ ಪಕ್ಕದಲ್ಲಿರುವ ಮಕ್ಕಳಿಗೆ ಧೂಳಿನಿಂದ ಯಾವುದೇ ಹಾನಿಯಾಗದಿದ್ದರೆ ಸಾಕು ಎಂದರು.

8. ಶ್ರೀ ವೀರುಪಾಕ್ಷಗೌಡ ಸಾ|| ಶೆಳ್ಳಗಿ ಗ್ರಾಮ: ಇವರು ಪತ್ರದ ಮೂಲಕ ಮಾನ್ಯ ಅಧ್ಯಕ್ಷರಿಗೆ ಹೊಲಕ್ಕೆ ಸರಿಯಾಗಿ ಪ್ರವಾಹದ ಸಂದರ್ಭದಲ್ಲಿ ವಿದ್ಯುತ್‌ಚ್ಛಕ್ತಿ ಪೊರೈಸಲು ಕೋರಿದರು.

➢ ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಮನವಿಯನ್ನು ಸ್ವೀಕರಿಸುತ್ತಾ, ಸದರಿ ಮನವಿಯಲ್ಲಿ ನೀರಾವರಿ ಮತ್ತು ವಿದ್ಯುತ್‌ಚ್ಛಕ್ತಿಯ ವಿಷಯವಿದ್ದು ಇದನ್ನು ಇವತ್ತೆ ಮುಂದಿನ ಕ್ರಮಕ್ಕಾಗಿ ಸಂಬಂಧ ಪಟ್ಟ ಇಲಾಖೆಗೆ ಸಲ್ಲಿಸಲಾಗುದೆಂದು ತಿಳಿಸಿದರು.

ಮುಂದುವರೆದು ಶೆಳ್ಳಗಿಯಿಂದ ಮಷ್ಟಳ್ಳವರೆಗೆ ಹಳ್ಳಗೆ 2ಕಿಮೀ ಇದ್ದು, ಸುರಪುರದಿಂದ ಶೆಳ್ಳಗೆ ಗ್ರಾಮಕ್ಕೆ ಬರಲು 10ನಿಮಿಷ ಸಾಕಾಗುತ್ತದೆ ಆದರೆ ಇಲ್ಲಿಂದ ಮುಷ್ಟಳ್ಳಗೆ ಹೋಗಲು ಅರ್ದ ಗಂಟೆಯಾಗುತ್ತಿದ್ದು, ಇದಕ್ಕೆ ಮರಳು ಗಣಿಗಾರಿಕೆಯಿಂದ ರಸ್ತೆ ಹದೆಗೆಡಲು ಕಾರಣವಾಗಿರುತ್ತದೆ ಎಂದರು.

9. ಶ್ರೀ ಶಾಮರಾಯ ಕುಲಕರ್ಣಿ ಸಾ|| ಶೆಳ್ಳಗಿ ಗ್ರಾಮ: ಇವರು ಮಾತನಾಡುತ್ತಾ ಮುಂಜಾನೆ 6ಗಂಟೆ ಯಿಂದ ಸಂಜೆ 6ಗಂಟೆಯವರೆಗೆ ಮಾತ್ರ ಮರಳುಗಾರಿಕೆ ನಡೆಸುವ ಬೋರ್ಡನ್ನು ಹಾಕಬೇಕು ಹಾಗೂ ರಾತ್ರಿ ವೇಳೆಯಲ್ಲಿ ಮರಳನ್ನು ಸಾಗಿಸಿದರೆ ಮಾಹಿತಿಯನ್ನು ನೀಡಲು ಬೋರ್ಡಲ್ಲಿ ದೂರವಾಣಿ ಸಂಖ್ಯೆಯನ್ನು ಬೋರ್ಡಲ್ಲಿ ನಮೂದಿಸಬೇಕೆಂದು ತಿಳಿಸಿದರು ಹಾಗೂ ರಾತ್ರಿ 6ಗಂಟೆಯ ನಂತರ ನಮ್ಮ ಯುವಕರು ಸಂಪರ್ಕಿಸಲು ಅನುವು ಮಾಡಿ ನಮ್ಮ ಸಮಸ್ಯೆಯನ್ನು ಆಲಿಸಬೇಕೆಂದರು.

➢ ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಈಗಾಗಲೇ ಸರ್ಕಾರ ಸಾಮಿದ್ಯ ಆರಂಬವಾಗುತ್ತಿದ್ದು, ಯಾರಿಗಾದರು ತೊಂದರೆಯಾದಲ್ಲಿ ನಾಮಫಲಕದಲ್ಲಿ ಆರೋಗ್ಯ, ಶಿಕ್ಷಣ ಮತ್ತು ರಸ್ತೆಗೆ ಸಂಬಂಧಿಸಿದ ಇಲಾಖೆಯವರ ದೂರವಾಣಿ ಸಂಖ್ಯೆಯನ್ನು ನಮೊದಿಸುತ್ತೆವೆ ಎಂದರು.

10. ಶ್ರೀ ಶರಣಬಸವ ಸಾ|| ಶೆಳ್ಳಗಿ ಗ್ರಾಮ: ಇವರು ಮಾತನಾಡುತ್ತಾ ಬೋರ್ಡಲ್ಲಿ ಯಾರ ಯಾರ ಮೊಬೈಲ್ ಸಂಖ್ಯೆಯನ್ನು ನಮೊದಿಸುತ್ತಿರಾ ಎಂದು ಪ್ರಶ್ನಿಸಿದರು.

➢ ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಸಮಸ್ಯೆಯಲ್ಲಿ ಆರೋಗ್ಯವಿಷಯವಾಗಿದ್ದರೆ ಆರೋಗ್ಯ ಇಲಾಖೆ, ರಸ್ತೆಗೆ ಸಂಬಂಧಿಸಿದ್ದರೆ ಸಾರಿಗೆ ಇಲಾಖೆ, ಗಣಿಗಾರಿಕೆಗೆ ಸಂಬಂಧಿಸಿದರೆ ಪರಿಸರ ಇಲಾಖೆಯವರ ದೂರವಾಣಿ ಸಂಖ್ಯೆಯನ್ನು ನಮೊದಿಸಲಾಗುವುದು ಎಂದು ತಿಳಿಸಿದರು.

ಮುಂದುವರೆದು ಮಾನ್ಯ ಅಧ್ಯಕ್ಷರ ದೂರವಾಣಿ ಸಂಖ್ಯೆಯನ್ನು ತೆಗೆದುಕೊಂಡು ಗ್ರಾಮಸ್ಥರಿಗೆ ಯಾವುದೇ ದೂರನ್ನು ತಿಳಿಸಬಹುದು ಎಂದರು ಹಾಗೂ ಗ್ರಾಮದ ಹತ್ತಿರವಿರುವ ಕೆರೆಗೆ ಜನರು ನದಿಗೆ ಬಿದ್ದು ಸಾವಿಗಿಡಾಗುತ್ತಿದ್ದು ಇದನ್ನು ತಪ್ಪಿಸಲು ಮುಂಜಾಗೃತೆ ಫಲಕವನ್ನು ಹಾಕಿ ಕಾವಲುಗಾರರನ್ನು ನೇಮಿಸಬೇಕೆಂದು ವಿನಂತಿಸಿದರು ಮತ್ತೆ ಇತ್ತೀಚಿಗೆ ಐದು ಜನ ಸಾವಿಗಿಡಾಗಿರುವುದನ್ನು ಪ್ರಸ್ತಾಪಿಸಿ ಇದರಿಂದ ಜನರ ಪ್ರಾಣ ತಪ್ಪಿಸಿ ಎಂದರು.

➤ <u>ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಪಂಚಾಯಿತಿ ಇಲಾಖೆಯ ಅಧಿಕಾರಿಗಳಿಗೆ ಸಮಸ್ಯೆಯನ್ನು ತುರ್ತಾಗಿ ಬಗೆಹರಿಸಿ ಎಂದು ಸೂಚಿಸಿದರು.</u>

ಅಂತಿಮವಾಗಿ ಸಭಾಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಸುದೀರ್ಘವಾದ ಅರ್ಥಗರ್ಭಿತವಾದ ತಮ್ಮ ಸಾರ್ವಜನಿಕ ಅಭಿಪ್ರಾಯ ಮತ್ತು ಸಲಹೆಗಳನ್ನು ಮಂಡಿಸಿದ್ದಿರಿ ನನ್ನ ವೃತ್ತಿಯಲ್ಲಿ 12ನೇ ಸಾರ್ವಜನಿಕ ಸಭೇಯಾಗಿದ್ದು, ಬಹಳ ಸಹ ವಿಸ್ತಾರವಾಗಿ ಯಾವ ಅಭಿವೃದ್ಧಿ ಕಾರ್ಯಗಳು ಆಗಬೇಕೆಂದು ಅಭಿಪ್ರಾಯವನ್ನು ತಿಳಸಿದ್ದಿರಿ ಮತ್ತು ಸಾಮಾಜಿಕ ಮತ್ತು ಗ್ರಾಮದ ಕಾಳಜಿಯನ್ನು ವ್ಯಕ್ತಪಡಿಸಿದ್ದಿರಿ ನಿಮಗೆ ಯಾವುದೇ ತೊಂದರೆಯಾದಲ್ಲಿ ಜಿಲ್ಲಾಡಳಿತ ನಿಮ್ಮ ಜೊತೆ ಇರುತ್ತದೆ ಎಂದು ತಿಳಿಸಿದರು ಮತ್ತು ಈ ಯೋಜನೆಗೆ ಸಂಬಂಧಿಸಿದಂತೆ ವ್ಯಕ್ತವಾದ ಅನಿಸಿಕೆಗಳನ್ನು/ಅಭಿಪ್ರಾಯಗಳನ್ನು/ಲಿಖಿತ ಸಲ್ಲಿಕೆಗಳ ಸಾರಾಂಶವನ್ನು ಮತ್ತೊಮ್ಮೆ ಸಭೆಗೆ ತಿಳಿಸುತ್ತಾ ಸದರಿ ಸಭೆಯ ನಡುವಳಿಗಳೊಂದಿಗೆ ಯಥಾವತ್ತಾಗಿ ಬರೆದು ವಿಡಿಯೋ ಮತ್ತು ಛಾಯಾಚಿತ್ರಗಳೊಂದಿಗೆ ಮುಂದಿನ ಕ್ರಮಕ್ಕಾಗಿ ಸರಕಾರಕ್ಕೆ ಸಲ್ಲಿಸಲಾಗುವುದೆಂದು ಸಭೆಗೆ ತಿಳಿಸಿದರು.

ಅಧಿಸೂಚನೆಯು ಪ್ರಕಟವಾದಗಿನಿಂದ ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಯಾದಗಿರಿಯಲ್ಲಿ ಮತ್ತು ಸಭೆಯಲ್ಲಿ ಸ್ವೀಕೃತಿಯಾದ ಮನವಿ/ದೂರು ಇತ್ಯಾದಿಗಳ ಪ್ರತಿಗಳನ್ನು (ಅನುಭಂದ–1) ಈ ನಡುವಳಿಯೊಂದಿಗೆ ಲಗತ್ತಿಸಿದೆ.

ಶಂಕರಗೌಡ ಸೋಮನಾಳ

ಶ್ರೀ ಶಂಕರಗೌಡ ಸೋಮನಳ
ಕೆ.ಎ.ಎಸ್. (ಆಯ್ಕೆ ಶ್ರೇಣಿ)
ಅಪರ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಪರಿಸರ ಸಾರ್ವಜನಿಕ ಸಭೆ, ಯಾದಗಿರಿ
ತಾ॥ & ಜಿ॥ ಜಿಲ್ಲೆ ಯಾದಗಿರಿ.